# ಸಂತೂರ್ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಮೇ ೩೧– ಗ್ರೇಡ್ ೧೨, ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಶಿಕ್ಷಣದ ನಂತರ ಉನ್ನತ ಶಿಕ್ಷಣ ಪಡೆಯಲು ಬಯಸುವ, ಆರ್ಥಿಕ ದುರ್ಬಲ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಹೆಣ್ಣು ಮಕ್ಕಳನ್ನು ಪ್ರೋತ್ಸಾಹಿಸುವ ಸಲುವಾಗಿ ವಿಪ್ರೋ ಕನ್ಸ್ಯೂಮರ್ ಕೇರ್ ಮತ್ತು ವಿಪ್ರೋಕೇರ್ಸ್ ಜೊತೆಯಾಗಿ 'ಸಂತೂರ್ ವಿದ್ಯಾರ್ಥಿ ವೇತನ ಕಾರ್ಯಕ್ರಮ'ವನ್ನು ೨೦೧೬–೧೭ ರಲ್ಲಿ ಆರಂಭಿಸಿದ್ದು, ಪ್ರಸಕ್ತ ಸಾಲಿನಲ್ಲಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಈಗಾಗಲೇ ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದಾದ್ಯಂತ ಸುಮಾರು ೧೮೦೦ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನ ಲಭಿಸುತ್ತಿದೆ. ವಿದ್ಯಾರ್ಥಿ ವೇತನದ ವಾರ್ಷಿಕ ಮೊತ್ತ ೨೪,೦೦೦ ರೂ. ಪ್ರತಿಯೊಬ್ಬ ಫಲಾನುಭವಿಗೆ ನೀಡಲಾಗುವ ಮೊತ್ತವನ್ನು ಟ್ಯೂಷನ್ (ಮನೆಪಾಠ) ಶುಲ್ಕ ಅಥವಾ ಶಿಕ್ಷಣದಲ್ಲಿ ಪ್ರಾಸಂಗಿಕವಾಗಿ ಬರುವ ಖರ್ಚಿಗೆ ಬಳಸಿಕೊಳ್ಳಬಹುದು.

ಮಾನವತೆ, ಮುಕ್ತ ಕಲೆ ಮತ್ತು ವಿಜ್ಞಾನಗಳ ಕಲಿಕೆಯನ್ನು ಪ್ರೋತ್ಸಾ ಹಿಸುವ ಉದ್ದೇಶದಿಂದ ಈ ಕ್ಷೇತ್ರಗಳಲ್ಲಿ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗಾಗಿ ಶೇ.೬೦ ವಿದ್ಯಾರ್ಥಿವೇತನವನ್ನು ಮೀಸಲಿರಿಸಲಾಗಿದೆ.

ಉಳಿದ ವಿದ್ಯಾರ್ಥಿವೇತನವನ್ನು ವೃತ್ತಿಪರ ಕೋರ್ಸ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಪಡೆದುಕೊಳ್ಳಬಹುದು. ಆಯ್ಕೆ ಪ್ರಕ್ರಿಯೆಯ ವೇಳೆ ಹಿಂದುಳಿದ ಜಿಲ್ಲೆಗಳಿಂದ ಬರುವ ಅರ್ಜಿಗಳಿಗೆ ಪ್ರಾಶಸ್ತ್ಯ ನೀಡಲಾಗುತ್ತದೆ. ಹೀಗಾಗಿ ಶೇ.೪೦ ವಿದ್ಯಾರ್ಥಿವೇತನ ಅಂತಹ ವಿದ್ಯಾರ್ಥಿಗಳಿಗೇ ಮೀಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. ೭೩೩೭೮೩೪ ೧೬೬ ಸಂಪರ್ಕಿಸಬಹುದು. ಇ–ಮೇಲ್: santoor.scholarship@wipro.com ಜಾಲತಾಣ: www.santoorscholar ships.com ನಲ್ಲಿ ಶೋಧಿಸಬಹುದು.